
REVIEW OF LITERATURE
ISSN: 2347-2723
IMPACT FACTOR : 2.0260 (UIF)
VOLUME - 4 | ISSUE - 7 | FEBRUARY – 2017

# ಯು.ಆರ್. ಅನಂತಮೂರ್ತಿಯವರ ಮಿಥುನ, ಮಯೂರ, ವ್ಯವಸ್ಥೆಯ ಪುರುಷ ಮತ್ತು ಸುಡುಗಾಡ ಸಿದ್ಧೇಶ ಕವನಗಳ ವಿಮರ್ಶೆ

**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ** ವಿಶ್ವವಿದ್ಯಾಲಯ, ಗುಲಬರ್ಗಾ.

ಅನಂತಮೂರ್ತಿಯವರು ತಮ್ಮ ಕಾಲ ಘಟ್ಟದಲ್ಲಿ ಬರುವ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಚರ್ಚಿಸುವ ಎದೆಗಾರಿಕೆ ಇವರಿಗಿದೆ. ಹೀಗಾಗಿಯೇ ಅನಂತಮೂರ್ತಿಯವರು ಕುಟುಂಬ, ರಾಜಕೀಯ, ದೇವರು, ಮೂಢನಂಬಿಕೆ, ಜಾತಿಯತೆಗಳ ಕುರಿತು ಮಾತನಾಡುತ್ತಾರೆ. ಒಬ್ಬ ಕವಿಯಾದವನಿಗೆ ಸಮಾಜವನ್ನು ತಿದ್ದುವ ಜವಾಬ್ದಾರಿ ಇದೆ ಎನ್ನತ್ತಾರೆ. ಹೀಗಾಗಿಯೇ ಯಾವುದೊಂದು ವಿಷಯ ತೆಗೆದುಕೊಂಡರು ನ್ಯಾಯ ಒದಗಿಸುತ್ತಾರೆ. ಯಾವುದೊಂದು ಮಿಥುನ, ಮಯೂರ, ವ್ಯವಸ್ಥೆಯ ಪುರುಷ ಮತ್ತು ಸುಡುಗಾಡ ಸಿದ್ಧೇಶ ಕವನಗಳಲ್ಲಿ ವಾಸ್ತವದ ಚಿತ್ರಣ ಮಾಡಿರುವುದು ಗೋಚರಿಸುತ್ತದೆ.

"ಅಂಥ ಅಚ್ಯುತ ಅಪೂರ್ಣನಮತೆ, ಪ್ರಿಯ, ತನ್ನವಳನ್ನು
ಮುದ್ದು ಮುದ್ದಾಗಿಯೆ ಮಳ್ಳ ಹೋಗುವುದಂತೆ,
ಸಿಕ್ಕಿ ಸಿಗದಂತೆ ತಣಿಯದೆ ತುಯ್ಯುವುದಂತೆ, ನಮ್ಮಂತೆ
ಬೆವರಿ ಗದ್ಗದ ಬಿಕ್ಕಿ ಹೋಳಾಗದಂತೆ ಕೂಡಿ ಇಮ್ಮೆಯಾಗಿ ಪಡೆಯರಂತೆ



ಅಲೆಯ ಮೇಲಲೆ ಸುಖವಂತೆ ಪಡುವಾಗ
ಕಣ್ಣಲ್ಲಿ ಕಣ್ಣನೆಟ್ಟ ಶೋದವಂತೆ
ಕಣ್ಣ್‌ಮುಚ್ಚರಂತೆನಮ್ಮಂತೆ ಉಮ್ಮಳಿಸಿ
ಚೆಲುಮೆ ಚಿಮ್ಮಿಸಿಕೊಂಡು ಒಡೆಯರಂತೆ"[೧]

ಪತ್ನಿಯನ್ನು ಪ್ರೀತಿಸುವ ಬಗೆ ಪಡೆದು ಖಿನ್ನತೆಯಲ್ಲಿ ಕುಸಿಯರಂತೆ ಕುರಿತಾಗಿ ಹೇಳುತ್ತಾರೆ. ಹೆಂಡತಿಯನ್ನು ಅಪಾರವಾಗಿ ಪ್ರೀತಿಸುವ ಗಂಡ ಅವಳ ಆಲಿಂಗನದಲ್ಲಿ ಎಲ್ಲವನ್ನು ಮರೆತು ಒಂದಾಗುತ್ತಾನೆ. ಅವಳ ಮುದ್ದುಮುದ್ದು ಮಾತಿಗೆ ಮಳ್ಳಾಗದಂತೆ ಎಚ್ಚರದಿಂದಲೇ ಇರುತ್ತಾನೆ.

ಹೆಂಡತಿಯ ಪ್ರೀತಿಯ ಅಲೆಯಲ್ಲಿ ಸಿಕ್ಕಗಂಡ ಅವಳ ಎಲ್ಲಾ ಸುಖವನ್ನು ಪಡೆದು ಕೊಳ್ಳುತ್ತಾನೆ ಕಣ್ಣಿನಲ್ಲಿ ಕಣ್ಣನ್ನಿಟ್ಟು ನೋಡುತ್ತಾನೆ. ಹೀಗೆ ದಾಂಪತ್ಯ ಸುಖವನ್ನು ಬಹುಮಾರ್ಮಿಕವಾಗಿ ಕವಿ ಹೇಳುತ್ತಾನೆ.

"ರಾಧೆ ದೊಡ್ಡವಳಂತೆ ಕೊಟ್ಟ ಕನ್ನಿಕೆಯಂತೆ
ಕಳ್ಳಿಗೂ ನಿನ್ನಂತೆ ಲಜ್ಜೆಂತೆ
ಮೊಲೆಗವನು ಮಗುವಂತೆ ತೊಡಗುವನು ತಿದಿಯಂತೆ
ಗಂಡನೂ ಮಿಂಡನೂ ಭಗವಂತನಂತೆ
ಕುಸಿದು ಎರಡೆರಡಾಗಿ ಬೆಯುವಂತೆ
ಅವಳು ಬಿಳಿಯಂತೆ ಇವನು ಕಪ್ಪಂತೆ ಕೊಡಿರಲು
ಕಪಾರು ಬಿಳಿಯಾರು ತಿಳಿಯದಂತೆ
ಹರಿಯುತಿದೆ ಕೂಡಿ ಕೂಡಲೆಂದೇ ಹರಿವ
ಸಂಗಮದ ಜಲವಂತೆ ನಿಜ ಮಿಥುನವಂತೆ
ನೀಡಿ ಇಡಿ ಹೊಕ್ಕಲಿವರು ಬಡಿ ಉಳಿಯರಂತೆ"[೨]

ಗಂಡನಾದವನು ತನ್ನೆಲ್ಲಾ ಕಷ್ಟ ಕಾರ್ಪಣ್ಯಗಳೂ ಮರೆತು ಹೆಂಡತಿಯ ಜೊತೆ ಒಂದಾಗುತ್ತಾನೆ. ಕಳ್ಳ, ಸುಳ್ಳ ಕುಡಕ, ಹೇಗೆ ಹಲವಾರು ಸತ್ಸಂಗವಿದ್ದ ಗಂಡನಿಗೂ ಸ್ತ್ರೀಯಾದವಳು ಸುಖವನ್ನು ನೀಡುತ್ತಾಳೆ. ಆದರೆ ಗಂಡಸು ಒಂದುಕಡೆ ಸ್ಥಿರವಾಗಿ ಇರಲಾರದ ವ್ಯಕ್ತಿ ಹೀಗಾಗಿ, ಗಂಡನೊ, ಮಿಂಡನೊ ಯಾವುದಾದರೂ ಒಂದಾಗಿ ಅವನು ಸುಖಪಡುತ್ತಾನೆ.

ಇವರಿಬ್ಬರಿಲ್ಲಿ ಗಂಡ ಕಪ್ಪಾಗಿದ್ದರು. ಸ್ವಿಕರಿಸುತ್ತಾಳೆ ಗಂಡ ಅಂಗವಿಕಲ ನಿದ್ದರೂ ಸಹಿಸಿಕೊಳ್ಳುತ್ತಾಳೆ. ರೋಗಿಷ್ಟನಿದ್ದರೂ ಸಹಿಸಿಕೊಂಡು ಅವನ ಜೊತೆ ಬಾಳ್ವೆ ಮಾಡುತ್ತಾಳೆ. ಆದರೆ, ಪುರುಷನಾದವನು ಹಾಗೆ ಮಾಡಲಾರ ಹೆಣ್ಣುಮಗಳಿಗೆ ಮಕ್ಕಳ ಆಗಿಲಿಲ್ಲ ವೆಂದರೆ, ಅವಳನ್ನು ಬಿಟ್ಟುಕೊಡುತ್ತಾನೆ. ರೋಗಿಷ್ಟನಾದರು ಬಿಡುತ್ತಾನೆ. ಅಕ್ರಮ ಸಂಬಂಧವಿದ್ದರು ಬಿಡುತ್ತಾನೆ. ಆದರೆ ಹೆಣ್ಣಾದವಳು, ಇವೆಲ್ಲವು ಸಹಿಸಿಕೊಂಡು ಗಂಡನಜೊತೆ ನೆಮ್ಮದಿಯಾಗಿ ಜೀವನ ನಡೆಸುತ್ತಾಳೆ. ಇಷ್ಟೆಲ್ಲ ವಿದ್ದರು ಗಂಡನ ಜೊತೆ ನಿಷ್ಕಲ್ಮಷ ಮನೋಭಾವದಿಂದ ಕೂಡಿಕೊಳ್ಳುವುದ ಹೆಣ್ಣಿನ ದೊಡ್ಡಗುಣ.

“ವಯಾಧರ್ಮಕ್ಕೆ ಅನುಗುಣವಾಗಿ
ಇದವನ ತಿಕ್ಕಲು
ವಯಧರ್ಮಕ್ಕೆ ಅನುಗುಣವಾಗಿ
ತೀರದೇ ಏಟ್ಸ್, ಯಯಾತಿ, ಚ್ಯವನರಂತೆನು
ಹೇಳಿಕೊಂಡ ತನ್ನ ಮೋಹದ ಯುವತಿಗೆ
ಇನ್ನೊಬ್ಬ ನನ್ನ ಪೂರ್ವಜ”[೩]

ಮನುಷ್ಯನ ಬಾಲ್ಯವಸ್ಥೆಯಲ್ಲಿ, ಯೌವ್ವನಾವಸ್ಥೆ, ವೃದ್ಯಾಪ್ಯಗಳಲ್ಲಿ ಜೀವನ ನಡೆಸುತ್ತಾನೆ ಹುಟ್ಟಿದವನು ಸಾಯಲೇಬೇಕು. ಬಾಲ್ಯವಸ್ಥೆಯಿಂದ ಯೌವನಾವಸ್ಥೆಗೆ ಬಂದ ಮನುಷ್ಯ, ಹುಡುಗಿಯರ ಸಂಗಕ್ಕೆ ಬೀಳುತ್ತಾನೆ. ಯಯಾತಿ ಚ್ಯವನರಂತೆ ಸಾವಿರಾರು ಸ್ತ್ರೀಯರ ಜೊತೆ ಅಕ್ರಮ ಸಂಬಂಧ ಹೊಂದಿದರು ಇವರ ತೀರದ ದಾಹ ಮುಂದೆ ಕೆಟ್ಟ ರೋಗಕ್ಕೆ ಗುರಿಯಾಗಬೇಕಾಗುತ್ತದೆ. ಇಗಂತೂ ಏಟ್ಸ್‌ರೋಗ ಲಕ್ಷಾನುಗಟ್ಟಲೆ ಜನರಿಗೆ ಹರಡಿಕೊಂಡಿದೆ. ಏಕ ಪತ್ನಿ ವೃತಸ್ಥನಾದ ಮನುಷ್ಯನಿಗೆ ಇವುಗಳ ಭಯವೆ ಇಲ್ಲ. ನೆಮ್ಮದಿಯಗಿ ಜೀವನ ನಡೆಸುತ್ತಾನೆ.

“ಪ್ರೀಯೆ , ಹೇಗೆ ಉಜ್ವಲ ಬಾಲವನ್ನೆತ್ತಿ ಕುಣಿಯುತ್ತ
ಹೆಣ್ಣು ನವಿಲನ್ನು ಗಂಡು ಏರುತ್ತದೆ.
ಏರಿ, ಎಲ್ಲೂ ಹೆಣ್ಣು ಕಾಣದಷ್ಟು ಗುಮ್ಮಿ ವ್ಯಾಪಿಸಲು
ಹೇಗೆ ಎರಡೂ ಕೇಕೆ ಹಾಕುತ್ತವೆ.
ರಾಜ ಬೀದಿಯೆಂದು ಅವಕ್ಕ ಲಕ್ಷ್ಯವಿಲ್ಲ
ಕಿಚ್ಚಿನಂತೆ ಉರಿಯುವ ಗಂಡಿನ ಪುಚ್ಚದ ಜಂಬದ ಕಣ್ಣುಗಳೂ ಹಾಗೇ ಬಾಡುತ್ತವೆ”[೩]

ಎರಡು ನವಿಗಳು ರಾಸಲೀಲೆಯಲ್ಲಿ ತೊಡಗಿವೆ. ಗಂಡು ನವಿಲು ನರ್ತನ ಮಾಡುತ್ತದೆ. ಹೆಣ್ಣುನವಿಲನ್ನು ಏರುತ್ತದೆ. ಹೆಣ್ಣು ನವಿಲುಕಾಣದಟ್ಟು ಅದನ್ನು ವ್ಯಾಪಿಸುತ್ತದೆ. ಎರಡು ಸಮ್ಮಿಲನದಿಂದ ಸಂತೋಷ ಪಡುತ್ತವೆ. ಅವುಗಳಿಗೆ ಇದು ರಾಜ ಬೀದಿಯೆಂದರು ಲಕ್ಷ್ಯದಿಲ್ಲಿಯೇ ಇಲ್ಲ. ಪಕ್ಷಿಗಳಿಗೆನು ಗೊತ್ತು, ರಾಜಬೀದಿ, ಅರಮನೆಯೆಂದು, ಹಾಗೆಯೇ ಮನುಷ್ಯರಾದವರು ಸಹ ಎಷ್ಟುಜನ, ದೇವಾಲಯ ಮಸೀದಿ ಗ್ರಂಥಾಲಯಗಲ್ಲಿ ರಾಸಲೀಲೆ ನಡೆಸಿದುಂಟು ಪಕ್ಷಿಗಳದು ಏನು ತಪ್ಪು ಎಂದು ನಮ್ಮನೆ ಪ್ರಶ್ನೆ ಮಾಡುತ್ತಾರೆ. ಎರಡು ನವಿಲುಗಳ ನಿದರ್ಶನ ವಿತ್ತು ಮನುಷ್ಯನ ಕೆಟ್ಟಗುಣಗಳನ್ನು ಹೇಳುತ್ತಾರೆ.

“ಸಭ್ಯತೆ, ವಿಶಾಲವಾದ ಹೆದ್ದಾರಿ
ರಾಜಬೀದಿ
ಪ್ರೇಮ ಕಿರಿದಾಗಲಿ
ಒಳದಾರಿ
ಗೊತ್ತು ಗುರಿ ಗಾಂಭೀರ್ಯ ಹೊಂಚಿ ನುಸುಳುವ ಥಳಕು
ಆಷಾಡ ಭೂತಿಗಳ ರಾಜಬೀದಿ
ದಿಗಿಲು ತಿಕ್ಕಲು ತೆವಲು ಅರ್ಪಣದ ಆವೇಶ
ಅವಿವೇಕಿ ಪ್ರೇಮಿಗಳ ಪೂಲಿಗಲ್ಲಿ”[೪]

ಮನುಷ್ಯನಾದವನು ಸಭ್ಯತೆ ಸಹನೆಶೀಲಗುಣಗಳ ಇದ್ದರು. ತಾಳ್ಮೆಯೇ ಅವನ ಸದ್ಗುಣ ಎನ್ನುತ್ತಾರೆ. ಗೊತ್ತುಗುರಿಗಳಿಲ್ಲದೆ ಯುವ ಪ್ರೇಮಿಗಳು ಹಾಳಾಗುವುದನ್ನು ತಿಳಿಸುತ್ತಾರೆ. ಅವರಿಗೆ ಮುಂದಿನ ಬಾಳ್ವೆಯ ಚಿಂತೆಯನ್ನು ಹೇಗೆ ಮಾಡುತ್ತಾರೆ. ಅವರಿಗೆ ಜೀವನದ ಪ್ರಜ್ಞೆಯೇ ಇರುವುದಿಲ್ಲ. ಹೀಗೆ ಒಂದಾಗಿ ಬಿಡುತ್ತಾರೆ. ಹುಡಗಿಯರಿಗೆ ಕೈಕೊಟ್ಟು ಓಡಿ ಹೋಗುತ್ತಾನೆ. ಇದೆಲ್ಲವು ಗೊತ್ತಾದಾಗ ಸಮಾದಲ್ಲಿ ಎಲ್ಲವನ್ನು ಕಳೆದು ಕೊಂಡು ಬದುಕು ನಡೆಸುತ್ತಾರೆ.

"ಮೈಗೆ ಮೈ ತಾಕದಂತೆ ನಡೆ ತಕ್ಕದ್ದು
ರಾಜ ಬೀದಿಯಲ್ಲಿ
ಅದೇ ದಿವ್ಯದ ಇಂಗಿತ
ಒಳದಾರಿಯಲ್ಲಿ"[೫]

ಅಮರ ಪ್ರೇಮಿಗಳಲ್ಲಿ ಒಂದು ಉದ್ದೇಶವಿರುತ್ತದೆ. ಮೈಗೆ ತಾಕಿಸುವುದಿಲ್ಲ ಹಾಗೆಯೇ ನಡೆದುಕೊಳ್ಳುತ್ತಾರೆ. ಕೇವಲ ಹೃದಯದಿಂದ ಹೃದಯಗೆ ಪ್ರೀತಿಸುತ್ತಾರೆ. ಕೇವಲ ಕಣ್ಣಿನ ಸನ್ನೆಗಳ ಮೂಲಕವೇ ಆನಂದಿಸುತ್ತಾರೆ. ಇತ್ತೀಚಿನ ಪ್ರೀತಿಯಂತು ಕಲ್ಮಶಪ್ರೀತಿ ಕೇವಲ ವ್ಯಭಿಚಾರಿಕ್ಕಾಗಿಯೆ ಪ್ರೀತಿಸುತ್ತಾರೆ. ಒಬ್ಬ ಹುಡುಗ ನಾಲ್ಕು ಜನ ಹುಡಿಗಿಯರನ್ನು, ಒಬ್ಬ ಹುಡುಗಿ ನಾಲ್ಕು ಐದುಜನ ಹುಡುಗರನ್ನು ಪ್ರೀತಿಸುವುದು ಸರ್ವೇಸಾಮಾನ್ಯವಾಗಿದೆ. ಇತ್ತೀಚಿನ ಚಲನ ಚಿತ್ರಗಳಲ್ಲಂತು ಪ್ರೀತಿ, ಪ್ರೇಮಗಳಿಲ್ಲದ ಚಲನ ಚಿತ್ರಗಳೆ ಇಲ್ಲ. ಮತ್ತು ಅಶ್ಲೀಲ ದೃಶ್ಯಗಳನ್ನು ತೋರಿಸಿ ಸಮಾಜವನ್ನು ಹಾಳುಮಾಡುತ್ತಿವೆ. ಇಂದಿನ ಚಲನ ಚಿತ್ರ ನಾಯಕಿಯರಿಗಂತೂ ಮಾನಮರ್ಯಾದೆ ಇಲ್ಲ. ತುಂಡು ತುಂಡು ಬಟ್ಟೆಗಳನ್ನು ಹಾಕಿ ನೃತ್ಯ ಮಾಡುತ್ತಾರೆ. ಹೀಗಾಗಿ ಇಂದಿನ ಯಾವ ಸಮಾಜ ಹಾಳಾಗುತಿರುವುದು ನೋವಿನ ಸಂಗತಿಯಾಗಿದೆ.

"ಸಾವಿರ ತಲೆಯ ಸಾವಿರ ಕಣ್ಣಿನ ಸಾವಿರ ಪಾದಗಳು
ವ್ಯವಸ್ಥೆಯ ಪುರುಷನಲ್ಲಿ
ಪ್ರಳಯ ತಾಂಡವದ್ಲಲಿ ತನ್ನರ್ದ ಹೆಣ್ಣಾಗಿ ಬಿಡುವ
ಸುಡುಗಾಡು ಸಿದ್ದೇಶ ಇಲ್ಲಿ"[೬]

ಹೀಗೆ ನಾನಾ ರೀತಿಯ ವೇಷಧರಿಸಿ ಮನುಷ್ಯನ ಬಾಳಿನಲ್ಲಿ ಮನರಂಜನೆಯನು ಕೊಡುವ ಸುಡುಗಾಡಿ ಸಿದ್ದೇಶ ಪಾತ್ರವಾಗಿ ಕೊಳ್ಳುತ್ತಾರೆ. ಹೆಣ್ಣಿನ ವೇಷ, ದೇವರು ದಿಂಡಿರು ವೇಷ ಹೇಗೆ ನಾನಾ ವೇಷಗಳು ಹಾಕಿ ಕೊಳ್ಳುವ ರೀತಿಯಲ್ಲಿ ಮನುಷ್ಯನ ಬಾಳು ಆಗಿ ಬಿಟ್ಟಿದೆ ಎನ್ನುತ್ತಾರೆ.

**ಅಡಿ ಟಿಪ್ಪಣಿ**

೧. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೯೫
೨. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೯೫
೩. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೯೬
೪. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೯೬
೫. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೯೮
೬. ಅನಂತಮೂರ್ತಿ ಯು.ಆರ್. : ಸಮಸ್ತ ಕಾವ್ಯ. ಪು – ೯೮



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**